ಕರ್ನಾಟಕ ವಿಧಾನ ಸಭೆ

ಮಂಗಳವಾರ 6ನೇ ಜುಲೈ 1999ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10-20ರ ಗಂಟೆಗೆ ಸಮಾವೇಶಗೊಂಡಿತು.

(ಶ್ರೀ ರಮೇಶ್ ಕುಮಾರ್‌ರವರು) ಪೀಠವನ್ನು ಅಲಂಕರಿಸಿದ್ದರು.

(1) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ಮಲ್ಪೆ ಬಂದರಿನಲ್ಲಿ ಮೀನುಗಾರಿಕಾ ಬೋಟ್‌ಗಳು ಸುಟ್ಟು ಹೋಗಿರುವ ಬಗ್ಗೆ.

ಶ್ರೀ ವಸಂತ ವಿ. ಸಾಲಿಯಾನ (ಕಾಪು) :— ಮಾನ್ಯ ಅಧ್ಯಕ್ಷರೇ, ಕಳೆದ ರಾತ್ರಿ 1 ಗಂಟೆಗೆ ಉಡುಪಿ ಜಿಲ್ಲೆಯ ಮಲ್ಪೆ ಮೀನುಗಾರಿಕೆ ಬಂದರಿನಲ್ಲಿ ಸುಮಾರು ನೂರಕ್ಕೂ ಹೆಚ್ಚು ಬೋಟ್‌ಗಳು ಸುಟ್ಟುಹೋಗಿವೆ. ಇದರ ಬಗ್ಗೆ ಕೋಟ್ಯಾಂತರ ರೂಪಾಯಿಗಳು ನಷ್ಟವಾಗಿದೆ. ಒಂದು ಬೋಟಿಗೆ ಸುಮಾರು 15 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮಾಡಿಸಿ, ಮೀನುಗಾರಿಕೆ ಮಾಡುತ್ತಿದ್ದರು. ಇವತ್ತು ಅಲ್ಲಿ ಸಾವಿರಾರು ಕುಟುಂಬಗಳ ಜೀವನಕ್ಕೆ ತುಂಬಾ ತೊಂದರೆಯಾಗಿದೆ. ನಾನು ತಮ್ಮ ಹತ್ತಿರ ಬೇಡಿಕೊಳ್ಳುವುದು ಇಷ್ಟೆ; ಆ ಸಂತ್ರಸ್ಥ ಕುಟುಂಬದವರಿಗೆ ಸೂಕ್ತ ಪರಿಹಾರವನ್ನು ಕೂಡಲೇ ಒದಗಿಸಿಕೊಡಬೇಕು ಮತ್ತೆ ಆ ಬೋಟ್‌ಗಳಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ ಅವರಿಗೆ ಮತ್ತು ಬೋಟ್ ಮಾಲೀಕರಿಗೆ ಸರಿಯಾದಂಥ ವಿಮೆ ಸಿಗುವ ರೀತಿಯಲ್ಲಿ, ಸರ್ಕಾರ ಪ್ರಥಮ ಆದ್ಯತೆಯನ್ನು ಕೊಟ್ಟು, ಅವರಿಗೆ ಸಹಕರಿಸಬೇಕಾಗಿ ತಮ್ಮ ಮುಖೇನ ನಾನು ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ. ದಯವಿಟ್ಟು ಇದರ ಬಗ್ಗೆ ದೀರ್ಘ ಚರ್ಚೆಗೆ ಕೂಡ ಅವಕಾಶವನ್ನು ತಾವು ಮಾಡಿಕೊಡಬೇಕಾಗಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಶಾಸಕರಾದ ವಸಂತ ಸಾಲಿಯಾನರವರು ತಿಳಿಸಿದಂತೆ, ನಿನ್ನೆ ರಾತ್ರಿ ಸುಮಾರು ಒಂದು ಗಂಟೆ ಹೊತ್ತಿಗೆ ಉಡುಪಿ ಮೀನುಗಾರಿಕಾ ಬಂದರಿನಲ್ಲಿ ಇಟ್ಟಿರತಕ್ಕ ಸುಮಾರು ನೂರಕ್ಕೂ ಹೆಚ್ಚು ಮೀನುಗಾರಿಕಾ ಪರ್ಸೀನ್ ಬೋಟುಗಳು ಬೆಂಕಿಗೆ ಆಹುತಿಯಾಗಿದೆ. ಕಾರವಾರ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿಯ ಅಗ್ನಿಶಾಮಕ ದಳದವರು, ಅದನ್ನು ನಿಲ್ಲಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಸಚಿವರು ಮತ್ತು ಉಡುಪಿ ಕ್ಷೇತ್ರದ ಶಾಸಕರು ಬೆಳಿಗ್ಗೆ ವಿಮಾನದಲ್ಲಿ ಅಲ್ಲಿಗೆ ಹೋಗಿದ್ದಾರೆ. ಈ ಸಂದರ್ಭದಲ್ಲಿ [illegible] ತಮ್ಮ ಮುಖೇನ ಕೇಳಿಕೊಳ್ಳುವುದು, ಏನೆಂದರೆ ಅಲ್ಲಿ ಸಂತ್ರಸ್ತರಿಗೆ ಮಧ್ಯಂತರ ಪರಿಹಾರವನ್ನು

ಕೊಡಿಸಿಕೊಡಬೇಕು. ಏಕೆಂದರೆ, ವಿಮೆ ಎಂದು ಹೇಳಿದರೆ ಬಹಳಷ್ಟು ಸಮಯ ಬೇಕಾಗುತ್ತದೆ. ಆದ್ದರಿಂದ, ಬಹಳ ಸರಳೀಕರಣದ ಮುಖಾಂತರ ತಕ್ಷಣ ಮಧ್ಯಂತರ ಪರಿಹಾರವನ್ನು ಕೊಡಿಸಬೇಕು. ಮತ್ತು ಸಂಬಂಧಪಟ್ಟಂಥ ಇಲಾಖಾ ಅಧಿಕಾರಿಗಳನ್ನು ತಕ್ಷಣ ಅಲ್ಲಿಗೆ ಕಳುಹಿಸಬೇಕು. ಏಕೆಂದರೆ, ಮಾನ್ಯ ಸಚಿವರು ಮಾತ್ರ ಹೋದರೆ ಸಾಕಾಗುವುದಿಲ್ಲ. ಯುದ್ಧದೋಪಾದಿಯಲ್ಲಿ ಈ ಕೆಲಸವನ್ನು ಮಾಡಿದರೆ ಆ ಜನರಿಗೆ ಪರಿಹಾರ ಸಿಗುತ್ತದೆ. ಆದ್ದರಿಂದ, ತಕ್ಷಣ ಅಲ್ಲಿ ಕೆಲಸ ಮಾಡತಕ್ಕಂಥವರಿಗೆ ಮತ್ತು ಬೋಟಿನ ಮಾಲೀಕರಿಗೆ ಪರಿಹಾರವನ್ನು ಕೊಡಬೇಕೆಂದು ತಮ್ಮ ಮುಖೇನ ಕಳಕಳಿಯಿಂದ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಅಧ್ಯಕ್ಷರೇ, ಇನ್ನೂ ಹೆಚ್ಚಿಗೆ ಹೇಳುವಂಥಾದ್ದು ಏನೂ ಇಲ್ಲ. ಮಿತ್ರರಾದ ಪ್ರತಾಪಚಂದ್ರಶೆಟ್ಟರು ಮತ್ತು ವಸಂತ ಸಾಲಿಯಾನರವರು ಹೇಳಿದ್ದಾರೆ. ಅಲ್ಲಿ ಈಗ ತುರ್ತು ಪರಿಹಾರದ ಅವಶ್ಯಕತೆ ಇದೆ. ಏಕೆಂದರೆ, ಅದನ್ನು ವೀಕ್ಷಣೆ ಮಾಡಿ, ವರದಿ ಬರುವವರೆಗೆ ಕಾಯುವಂಥಾದ್ದಲ್ಲ. ಅತಿ ಶೀಘ್ರವಾಗಿ ಆ ಜನರಿಗೆ ಪರಿಹಾರ ಸಿಗಬೇಕು. ಏಕೆಂದರೆ, ಈಗ ಅವರು ಮೀನುಗಾರಿಕೆಗೆ ಹೋಗುವ ಹಾಗೆ ಇಲ್ಲ. ಎಲ್ಲಾ ಬೋಟುಗಳೂ ಒಂದೇ ಕಡೆ ಕ್ರೋಢೀಕರಣವಾಗಿದ್ದು, ಎಲ್ಲಾ ಬೋಟುಗಳಿಗೂ ಬೆಂಕಿ ಒಮ್ಮಿದೊಮ್ಮೆಲೇ ಬೆಂಕಿ ಹತ್ತಿದೆ, ಅದನ್ನು ನಂದಿಸುವುದಕ್ಕೂ ಆಗುವುದಿಲ್ಲ. ಈ ಪರಿಸ್ಥಿತಿ ಇರುವುದರಿಂದ, ತುರ್ತು ಪರಿಹಾರವನ್ನು ಶೀಘ್ರವಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೇ, ನಿನ್ನೆ ರಾತ್ರಿ ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ಸುಮಾರು 97ಕ್ಕೂ ಹೆಚ್ಚು ಬೋಟುಗಳು ಅನಾಹುತಕ್ಕೆ ಒಳಗಾಗಿರುವ ಬಗ್ಗೆ ವರದಿ ಸರ್ಕಾರಕ್ಕೆ ತಲುಪಿದೆ. ರಾತ್ರಿಯೇ ನಮ್ಮ ಪೋಲೀಸ್ ಇಲಾಖೆಯ ಜಿಲ್ಲಾ ವರಿಷ್ಠರು, ಸಿಬ್ಬಂದಿವರ್ಗದವರು ಮತ್ತು ಅಗ್ನಿಶಾಮಕದಳದವರು ಹೋಗಿ, ಅದನ್ನು ಕಂಟ್ರೋಲ್‌ಗೆ ತರುವುದಕ್ಕೆ ಪ್ರಯತ್ನಮಾಡಿದ್ದಾರೆ. ಇವತ್ತು ಬೆಳಗಿನಜಾವ 6 ಗಂಟೆಯ ಹೊತ್ತಿಗೆ ಬೆಂಕಿ ಆರಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಮೀನುಗಾರಿಕಾ ಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀಮಾನ್ ಜಯಪ್ರಕಾಶ್ ಹೆಗಡೆಯವರು ಇವತ್ತು ಸ್ಥಳಕ್ಕೆ ಹೋಗಿದ್ದಾರೆ. ಮಾನ್ಯ ಸದಸ್ಯರಿಗೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಹಾಗೂ ವಿಶೇಷವಾಗಿ ಬೋಟುಗಳನ್ನು ಕಳೆದುಕೊಂಡಿರತಕ್ಕ ಮೀನುಗಾರರಿಗೆ ಮತ್ತು ಆಸ್ತಿ ನಷ್ಟವಾಗಿರುವವರಿಗೆಲ್ಲರ ಬಗ್ಗೆಯೂ ನಮಗೆ ಅನುಕಂಪ ಇದೆ. ಯಾವರೀತಿ ಪರಿಹಾರ ಕೊಡಬೇಕು, ಎಷ್ಟು ಕೊಡಬೇಕು ಏನು ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಅಧಿಕಾರಿಗಳ ಜೊತೆ ಅಲ್ಲಿಗೆ ಹೋಗಿ ವೀಕ್ಷಣೆ ಮಾಡಿದ ನಂತರ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಇದು ಅಕಸ್ಮಿತವಾಗಿ ಆಗಿರತಕ್ಕಂಥ ಕೆಲಸ. ಖಂಡಿತವಾಗಿಯೂ ಅವರು ಕಷ್ಟದಲ್ಲಿದ್ದಾರೆ. ಅವರಿಗೆ ಸರ್ಕಾರ ಸಹಾಯವನ್ನು ಮಾಡುತ್ತದೆ.